**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1145/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | ರವೀಂದ್ರ ಎನ್ . | ಪ್ರಾಸಾಃ 9 |
| ತಂದೆಯ/ಗಂಡನ ಹೆಸರು | | ನಂಜಯ್ಯ | ಚಾಸಾಃ 11 |
| ವಯಸ್ಸು | | 53 ವರ್ಷ | |
| ಕೆಲಸ | | ಪೋಲಿಸ್ ಇನ್ಸ್ ಪೆಕ್ಟರ್ | ಸಾ ಪ್ರ ಬೋ |
| ವಾಸ | | ಸಿ.ಐ.ಡಿ, ಬೆಂಗಳೂರು | ದಿಃ 31/10/2023 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ಬದನವಾಳು ಪೋಲಿಸ್ ಠಾಣೆಯಲ್ಲಿ 11.09.2013 ರಿಂದ 05.01.2015 ವರೆಗೂ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 28.06.2014 ನಾನು ಈ ಪ್ರಕರಣದ ಕಡತವನ್ನು ಚಾಸಾ-10 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿರುತ್ತೇನೆ.

ಅದೇ ದಿನ ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-2 ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ-3 ಮತ್ತು 4 ರವರ ಸಮಕ್ಷಮ ಬೆಳಗ್ಗೆ 11.00 ಗಂಟೆಯಿಂದ 11.45 ಗಂಟೆಯವರೆಗೆ ಸ್ಥಳ ಮಹಜರ್ ಜರುಗಿಸಿರುತ್ತೇನೆ.

ಅದೇ ದಿನ ಚಾಸಾ-2 ರಿಂದ 4, 6 ರಿಂದ 9 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿನಾಂಕ 29.06.2014 ರಂದು ಚಾಸಾ-1 ರವರ ಮರುಹೇಳಿಕೆ ಮತ್ತು ಚಾಸಾ-5 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿನಾಂಕ 25.07.2014 ರಂದು ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾದಾರಗಳು ಇದ್ದ ಕಾರಣ ಅವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ದಿನಾಂಕ 02.09.2014 ರಂದು ಚಾಸಾ-1 ರವರಿಂದ ಚಾಸಾ-2 ರಿಂದ 4 ರವರ ಕರ್ತವ್ಯ ದೃಡೀಕರಣ ಪತ್ರವನ್ನು ಪಡೆದು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಈಗ ನನಗೆ ತೋರಿಸಿದ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು, ಅದರಲ್ಲಿ ನನ್ನ ರುಜು ಇರುತ್ತದೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ರುಜುವನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ದಾಖಲೆಗಳು ನಾನು ದಾಖಲಿಸಿಕೊಂಡ ಚಾಸಾ-4 ರಿಂದ 9 ರವರ ಹೇಳಿಕೆಗಳಾಗಿರುತ್ತದೆ. ಅವುಗಳನ್ನು ಈಗಾಗಲೇ ನಿಪಿ-3 ರಿಂದ ನಿಪಿ-7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ರುಜುವನ್ನು ಕ್ರಮವಾಗಿ ನಿಪಿ-3(ಎ) ಇಂದ ನಿಪಿ-7(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ದಾಖಲೆಯು ಚಾಸಾ-1 ರವರಿಂದ ಸ್ವೀಕರಿಸಿದ ಕರ್ತವ್ಯ ದೃಡೀಕರಣ ಪತ್ರವಾಗಿರುತ್ತದೆ. ಕರ್ತವ್ಯ ದೃಡೀಕರಣ ಪತ್ರವನ್ನು ನಿಪಿ-8 ಎಂದು, ಸಾಕ್ಷಿಯ ರುಜುವನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಆರ್.ಎಂ.ಎಸ್. ಆರೋಪಿತ ಪರ ವಕೀಲರಿಂದಃ**

ನಾನು ಸ್ಥಳಕ್ಕೆ ಹೋಗಿ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ಅನ್ನು ಠಾಣೆಯಲ್ಲಿಯೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆ ಮತ್ತು ಮರುಹೇಳಿಕೆಗಳನ್ನು ದಾಖಲಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಆರೋಪಿತರ ಹೆಸರು ನಮೂದಾಗಿಲ್ಲ ಎಂದರೆ ಸರಿ. ಆರೋಪಿತರಿಗೆ ತೊಂದರೆ ನೀಡುವ ಸಲುವಾಗಿ ನಾನು, ಅಬಕಾರಿ ಇಲಾಖೆಯವರು ಮತ್ತು ಕಂಪನಿಯವರು ಶಾಮೀಲಾಗಿ ಆರೋಪಿತರ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ರೀತಿಯಲ್ಲಿ ಚಾಸಾ-1 ರಿಂದ 4 ರವರ ಕರ್ತವ್ಯಕ್ಕೆ ಅಡ್ಡಿ ಪಡಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**